

# ‘ಮೇಡಂಜಿ’ ಮೇಲೆ ಮಧುರ್ ಮುನಿಸು?

ಮಧುರ್ ಭಂಡಾರ್ಕರ್ ಮತ್ತು ಪ್ರಿಯಾಂಕಾ ಚೋಪ್ರಾ ಹೆಸರನ್ನು ಒಟ್ಟಿಗೆ ಕೇಳಿದಾಗ ತಕ್ಷಣ ನೆನಪಾಗುವುದು ‘ಫ್ಯಾಷನ್’ ಸಿನಿಮಾ. 2008ರಲ್ಲಿ ತೆರೆಕಂಡ ಈ ಚಿತ್ರ ಪಿಗ್ಗಿಯ ವೃತ್ತಿಬದುಕಿನ ಮಹತ್ವದ ಸಿನಿಮಾಗಳಲ್ಲಿ ಒಂದು. ಏಕೆಂದರೆ ಆಕೆಗೆ ರಾಷ್ಟ್ರಪ್ರಶಸ್ತಿ ತಂದುಕೊಟ್ಟ ಚಿತ್ರವಿದು. ಈ ಸಿನಿಮಾದ ಬಳಿಕ ನಿರ್ದೇಶಕ ಮಧುರ್ ಭಂಡಾರ್ಕರ್ ಅವರ ಸಿನಿಮಾದಲ್ಲಿ ಮತ್ತೆ ಪಿಗ್ಗಿ ಕಾಣಿಸಿಕೊಂಡಿಲ್ಲ. ಏಳು ವರ್ಷದ ಬಳಿಕ ಈ ಜೋಡಿ ಮತ್ತೆ ಒಂದಾಗಲು ಮುಂದಾಗಿತ್ತು. ಮಧುರ್ ನಿರ್ದೇಶನದ ‘ಮೇಡಂಜಿ’ ಚಿತ್ರಕ್ಕೆ ಸಹ ನಿರ್ಮಾಪಕಿಯಾಗಿ ಹಣ ಹೂಡಲೂ ಪಿಗ್ಗಿ ಮುಂದಾಗಿದ್ದಳು. ಆದರೆ ಇಬ್ಬರ ನಡುವೆ ಯಾವ ಕದನ ಉಂಟಾಗಿದೆಯೋ ಗೊತ್ತಿಲ್ಲ, ಪಿಗ್ಗಿ ಮೇಲೆ ಮಧುರ್ ಮುನಿಸಿಕೊಂಡಿದ್ದಾರೆ ಎಂಬ ಸುದ್ದಿ ಕೇಳಿ ಬಂದಿದೆ.

ಇತ್ತೀಚೆಗೆ ತೆರೆಕಂಡ ಮಲ್ಲಿಕಾ ಶೆರಾವತ್ ಅಭಿನಯದ ‘ಡರ್ಟಿ ಪಾಲಿಟಿಕ್ಸ್’ನ ಕಥೆಗೆ ಹೋಲಿಕೆಯಾಗುವ ಕೆಲವು ಅಂಶಗಳು ‘ಮೇಡಂಜಿ’ಯಲ್ಲಿತ್ತು. ಹೀಗಾಗಿ ಮಧುರ್, ಸ್ಕ್ರಿಪ್ಟ್ ಬದಲಿಸಲು ಕುಳಿತಿದ್ದರು. ಈ ನಡುವೆ ಚಿತ್ರೀಕರಣವೊಂದಕ್ಕೆ ಅಮೆರಿಕ ಹೋಗಿ ಬಂದ ಪಿಗ್ಗಿ ನೇರವಾಗಿ ಕಾಲಿಟ್ಟದ್ದು ಸಂಜಯ್ ಲೀಲಾ ಬನ್ಸಾಲಿ ನಿರ್ದೇಶನದ ‘ಬಾಜಿರಾವ್ ಮಸ್ತಾನಿ’ ಚಿತ್ರದ ಸೆಟ್‌ಗೆ. ಇದೇ ಮಧುರ್ ಕೋಪಕ್ಕೆ ಕಾರಣ ಎನ್ನಲಾಗುತ್ತಿದೆ.

‘ಬನ್ಸಾಲಿ ಸಿನಿಮಾ ಜತೆಗೆ ರೀಮಾ ಕಗ್ತಿ ನಿರ್ದೇಶನದ ಚಿತ್ರಕ್ಕೂ ಪ್ರಿಯಾಂಕಾ ಸಿದ್ಧತೆ ನಡೆಸಿದ್ದಾಳೆ. ಆದರೆ ತನ್ನದೇ ನಿರ್ಮಾಣದ ಚಿತ್ರವನ್ನು ವಿಳಂಬ ಮಾಡುತ್ತಿದ್ದಾಳೆ. ಈ ಚಿತ್ರವನ್ನು ಮೊದಲೇ ಮುಗಿಸಿ ಬಳಿಕ ಆ ಚಿತ್ರಗಳತ್ತ ಹೋಗಬಹುದಿತ್ತು’ ಎನ್ನುವುದು ಮಧುರ್ ಬೇಸರವಂತೆ. ಈ ನಡುವೆ ಸಿನಿಮಾಗಳಲ್ಲಿ ಸಿಕ್ಕಾಪಟ್ಟೆ ಬಿಜಿಯಾಗಿರುವ ಪಿಗ್ಗಿ ₹10 ಕೋಟಿ ಆಫರ್ ಮಾಡಿದ್ದರೂ ರಿಯಾಲಿಟಿ ಷೋ ಒಂದರ ತೀರ್ಪುಗಾರಿಕೆ ಜವಾಬ್ದಾರಿ ವಹಿಸಿಕೊಳ್ಳಲು ಒಲ್ಲೆ ಎಂದಿರುವ ವರ್ತಮಾನವೂ ಬಂದಿದೆ.

‘ಮಧುರ್ ಮತ್ತು ಪ್ರಿಯಾಂಕಾ ನಡುವೆ ಅಂತಹ ಕಲಹವೇನೂ ಆಗಿಲ್ಲ. ಎಲ್ಲವೂ ಸರಿಯಾಗಿಯೇ ಇದೆ’ ಎಂದು ಮಧುರ್ ಆಪ್ತವಲಯದ ಮೂಲಗಳು ಸ್ಪಷ್ಟನೆ ನೀಡಿವೆ. ಬೆಂಕಿಯಿಲ್ಲದೆ ಹೊಗೆ ಆಡುವುದಿಲ್ಲ ಎನ್ನುವುದು ಬಿ–ಟೌನ್ ಗಾಸಿಪ್‌ಪ್ರಿಯರ ಕೊಂಕು!

‘ಹೋಗಿ ಹೋಗಿ ಯಾರೊಂದಿಗೆ ಹೋಲಿಸುವುದು? ಸನ್ನಿ ಲಿಯೋನ್ ಜೊತೆಗಾ?’ ಎಂದು ಸಿಟ್ಟಿಗೆದ್ದಿರುವ ರಾಖಿ ಸಾವಂತ್, ಸ್ವತಃ ತನ್ನನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಗಳಿಸಿದ ಜೆನ್ನಿಫರ್ ಲೋಪೆಜ್ ಮತ್ತು ಮಡೋನ್ನಾರೊಂದಿಗೆ ಹೋಲಿಸಿಕೊಳ್ಳುತ್ತಿದ್ದಾಳೆ. ವೀಡಿಯೊ ಆಲ್ಬಂ ಒಂದಕ್ಕೆ ತುಸು ಹೆಚ್ಚೇ ಗ್ಲಾಮರಸ್ ಆಗಿ ದಿರಿಸು ತೊಟ್ಟಿದ್ದಳು ರಾಖಿ. ಅದನ್ನು ಕಂಡ ಸುದ್ದಿಮಿತ್ರರು, ‘ಬಿ–ಟೌನ್‌ನಲ್ಲಿ ಹೊಸ ಗಾಳಿ ಬೀಸುತ್ತಿರುವ ಸನ್ನಿ ಲಿಯೋನ್‌ಗೆ ಪೈಪೋಟಿ ನೀಡಲು ಸಿದ್ಧರಾಗಿರುವಂತಿದೆ?’ ಎಂದು ಕೆಣಕಿದರು. ಹೀಗೆ ಕೇಳಿದ ಮೇಲೆ ರಾಖಿಗೆ ಕೋಪ ಬಾರದಿರುತ್ತದೆಯೇ?

**ಮಡೋನ್ನಗೆ ಹೋಲಿಸಿ ಅಂದಳು ರಾಖಿ!**

‘ದಯವಿಟ್ಟು ನನ್ನನ್ನು ಸನ್ನಿ ಲಿಯೋನ್‌ಗೆಲ್ಲಾ ಹೋಲಿಸಬೇಡಿ. ನಾನು ಜನಪ್ರಿಯತೆ ಸಂಪಾದಿಸಿರುವುದು ನೃತ್ಯ, ಅಭಿನಯ, ರಿಯಾಲಿಟಿ ಷೋಗಳ ಮೂಲಕ ಮತ್ತು ವೀಕ್ಷಕರ ಹೃದಯ ಗೆಲ್ಲುವ ಮೂಲಕ. ಇದಕ್ಕಾಗಿ ನಾನು ಎಂದಿಗೂ ವಯಸ್ಕ ಚಿತ್ರಗಳನ್ನು ಮಾಡಿಲ್ಲ. ಇದು ನಿಮಗೆ ಅರ್ಥವಾಗುತ್ತದೆಂದು ಭಾವಿಸುತ್ತೇನೆ’ ಎಂದು ರಾಖಿ ಖಾರವಾಗಿಯೇ ಉತ್ತರಿಸಿದ್ದಾಳೆ.

ಇಷ್ಟಕ್ಕೇ ಸುಮ್ಮನಾಗಿದ್ದರೆ ರಾಖಿ ಮಾತನ್ನು ಗಂಭೀರವಾಗಿ ಪರಿಗಣಿಸಿ, ಆಕೆಯನ್ನು ಸನ್ನಿಗೆ ಹೋಲಿಸಿದ್ದು ತಪ್ಪು ಎಂದು ತಿದ್ದಿಕೊಳ್ಳುತ್ತಿದ್ದರೇನೋ. ಆದರೆ ಇನ್ನೂ ಒಂದು ಹೆಜ್ಜೆ ಮುಂದೆ ಹೋದ ಆಕೆ, ‘ನಾನು ಗ್ಲಾಮರಸ್ ಮತ್ತು ತುಂಬಾ ಚುರುಕು. ನನ್ನ ಪ್ರಕಾರ ನೀವು ನನ್ನನ್ನು ಜೆನಿಫರ್ ಲೋಪೆಜ್, ಮಡೋನ್ನಾರೊಂದಿಗೆ ಹೋಲಿಸಬಹುದು’ ಎಂದಿದ್ದಾಳೆ. ಸುದ್ದಿಮಿತ್ರರು ಬಿಟ್ಟಾರೆಯೇ? ಈಗ ಎಲ್ಲಾ ಕಡೆಯೂ ರಾಖಿಯದೇ ಸುದ್ದಿ. ‘ನನ್ನನ್ನು ಮಡೋನ್ನಾ ಜತೆ ಹೋಲಿಸಿ’ ಎಂದು. ಹಾಸ್ಯಾಸ್ಪದ ಮತ್ತು ಮೂರ್ಖತನದ ಹೇಳಿಕೆಗಳನ್ನು ನೀಡುವುದರಲ್ಲಿ ರಾಖಿ ಹೆಸರುವಾಸಿ. ತಾನು ಹೇಳಿದ್ದು ಸುದ್ದಿಯಾಗುತ್ತದೆ ಎಂಬುದನ್ನು ಅರಿತೇ ರಾಖಿ ಹೀಗೆ ಯಬಡಾ ತಬಡಾ ಹೇಳಿಕೆ ನೀಡುತ್ತಿದ್ದಾಳೆಯೋ ಗೊತ್ತಿಲ್ಲ. ಅದೇನೇ ಇರಲಿ, ರಾಖಿ ಮೂಲಕ ನಮಗೆ ಮಡೋನ್ನಾ, ಜೆನ್ನಿಫರ್ ದಕ್ಕುತ್ತಿದ್ದಾರೆ ಎಂದು ಅಭಿಮಾನಿಗಳು ಖುಷಿ ಆಗಿದ್ದಾರಂತೆ!

■ ಅಮಿ

